1	2	3	4
39.	ಪ್ರೇಮಕುಮಾರಿ	ಬ್ರಿಟಿಷ್, ಕೌನ್ಸಿಲ್ ಭರಿಸಿದೆ	
40.	ಸುರೇಖ ವಿಜಯಪ್ರಕಾಶ್		
41.	ಬಿ.ಎ. ಖಡಿ	ಸಂಬಂಧಿಸಿದ ಸಂಸ್ಥೆ ಭರಿಸುತ್ತದೆ.	ಜರ್ಮನಿ.

ಕರ್ನಾಟಕ ಲೋಕಸೇವಾ ಆಯೋಗದಿಂದ ಪ್ರಥಮ ಮತ್ತು ದ್ವಿತೀಯ ದರ್ಜೆ ಸಹಾಯಕರ ಹುದ್ದೆ ಭರ್ತಿ

2105 - ಶ್ರೀ ರಾಮಲಿಂಗ ರೆಡ್ಡಿ (ಜಯನಗರ) : ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕರ್ನಾಟಕ ಲೋಕ ಸೇವಾ ಆಯೋಗವು ಪ್ರಥಮ ಮತ್ತು ದ್ವಿತೀಯ ದರ್ಜೆ ಸಹಾಯಕರ ಹುದ್ದೆಗಳಿಗೆ ಅರ್ಜಿಯನ್ನು ಕರೆದಿರುವುದೇ?

ಆ) ಹಾಗಿದ್ದಲ್ಲಿ, ಯಾವಾಗ ಅರ್ಜಿಯನ್ನು ಕರೆಯಲಾಗಿತ್ತು ಹಾಗೂ ಎಷ್ಟು ಅರ್ಜಿಗಳು ಬಂದಿವೆ?

ಇ) ಪ್ರಥಮ ಹಾಗೂ ದ್ವಿತೀಯ ದರ್ಜೆ ಸಹಾಯಕರ ಹುದ್ದೆಗಳಿಗೆ ಪರೀಕ್ಷೆಗಳನ್ನು ನಡೆಸಲಾಗಿದೆಯೇ?

ಈ) ಖಾಲಿ ಇರತಕ್ಕ ಈ ಹುದ್ದೆಗಳೆಷ್ಟು?

ಉ) ಈ ಹುದ್ದೆಗಳಿಗೆ ಯಾವಾಗ ಲಿಖಿತ ಪರೀಕ್ಷೆಗಳನ್ನು ನಡೆಸಲಾಗುವುದು? (ವಿವರ ನೀಡುವುದು)

ಶ್ರೀ ಜೆ.ಹೆಚ್. ಪಟೇಲ್ (ಮುಖ್ಯಮಂತ್ರಿಗಳು) :

ಅ) ಹೌದು

ಆ) ದಿನಾಂಕ 3.10.1996 ರಂದು ಅರ್ಜಿಯನ್ನು ಕರೆಯಲಾಗಿತ್ತು. ಪ್ರಥಮ ದರ್ಜೆ ಸಹಾಯಕರ ಹುದ್ದೆಗಳಿಗೆ ಸುಮಾರು 1,50,000 ಅರ್ಜಿಗಳು ಹಾಗೂ ದ್ವಿತೀಯ ದರ್ಜೆ ಸಹಾಯಕರ ಹುದ್ದೆಗಳಿಗೆ ಸುಮಾರು 7,00,000 ಅರ್ಜಿಗಳು ಬಂದಿವೆ.

ಇ) ಇನ್ನೂ ಇಲ್ಲ.

ಈ) ಪ್ರಥಮ ದರ್ಜೆ ಸಹಾಯಕರು - 966

ದ್ವಿತೀಯ ದರ್ಜೆ ಸಹಾಯಕರು - 1030